ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No:0821-2417107

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID: gmtech@cescmysore.org

Company Identity Number[CIN]:- **U40109KA2004SGC035177**

**ಸಂಖ್ಯೆ: ಚಾವಿಸನಿನಿ/ಪ್ರವ್ಯ(ತಾ)/ಉಪ್ರವ್ಯ(ಎಂಐಎಸ್)/ಸಪ್ರವ್ಯ-2/21-22/** 20564-69 **ದಿನಾಂಕ:** 16 FEB 2022

ಮುಖ್ಯ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನಾ ವಲಯ,
ಚಾವಿಸನಿನಿ, ಮೈಸೂರು.

ಮಾನ್ಯರೇ,

**ವಿಷಯ:** 66 ಕೆ.ವಿ. ಹೂಟಗಳ್ಳಿ-ಬಾರ್ಕ್1 ಮತ್ತು 2 ಜೋಡಿ ಮಾರ್ಗ, 66 ಕೆ.ವಿ. ಹೂಟಗಳ್ಳಿ-ಹುಣಸೂರು ಮಾರ್ಗ ಮತ್ತು 66 ಕೆ.ವಿ. ಹೂಟಗಳ್ಳಿ-ಇಲವಾಲ-ಪಿರಿಯಾಪಟ್ಟಣ ಮಾರ್ಗಗಳ ಮಾರ್ಗಮುಕ್ತತೆಗೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:** 1. ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು ರವರ ಪತ್ರ ಸಂಖ್ಯೆ: 9692-96 ದಿನಾಂಕ: 05.02.2022.
2. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ ಮೈಸೂರು ರವರ ಪತ್ರ ಸಂಖ್ಯೆ: 6412-14 ದಿನಾಂಕ: 15.02.2022.
3. ನಿರ್ದೇಶಕರು(ತಾಂ)ರವರ ಅನುಮೋದಿತ ಟಿಪ್ಪಣಿ ದಿನಾಂಕ: 16.02.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೈಸೂರು ನಗರ ಕೇರ್ಗಳ್ಳಿ ಕೈಗಾರಿಕಾ ಪ್ರದೇಶ ವ್ಯಾಪ್ತಿಯಲ್ಲಿ ಹಾದುಹೋಗಿರುವ 220 ಕೆ.ವಿ ಮತ್ತು 66 ಕೆ.ವಿ ಅಧಿಕ ವಿದ್ಯುತ್ ಮಾರ್ಗಗಳ ಸ್ಥಳಾಂತರ/ಎತ್ತರಿಸುವುದು/ಮಾರ್ಪಾಡು ಮಾಡುವ ಸಂಬಂಧ 66 ಕೆ.ವಿ ಹೂಟಗಳ್ಳಿ - ಹುಣಸೂರು ಮತ್ತು ಹೂಟಗಳ್ಳಿ-ಇಲವಾಲ-ಪಿರಿಯಾಪಟ್ಟಣ ಏಕ ಮಾರ್ಗದಲ್ಲಿನ ಟವರ್ ಬದಲಾವಣೆ ಮತ್ತು ವಾಹಕ ಎಳೆಯುವ ಕಾಮಗಾರಿಯನ್ನು ಕೈಗೊಳ್ಳಲು 66 ಕೆ.ವಿ. ಹೂಟಗಳ್ಳಿ-ಬಾರ್ಕ್1 ಮತ್ತು 2 ಜೋಡಿ ಮಾರ್ಗ, 66 ಕೆ.ವಿ. ಹೂಟಗಳ್ಳಿ -ಹುಣಸೂರು ಮಾರ್ಗ ಮತ್ತು 66 ಕೆ.ವಿ. ಹೂಟಗಳ್ಳಿ-ಇಲವಾಲ-ಪಿರಿಯಾಪಟ್ಟಣ ಮಾರ್ಗಗಳ ಮಾರ್ಗ ಮುಕ್ತತೆ ಪಡೆಯಲು ಸಹಮತ ನೀಡುವಂತೆ ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು ರವರು ಕೋರಿರುತ್ತಾರೆಂದು ತಿಳಿಸಿರುತ್ತೀರಿ.

ಮುಂದುವರೆದು, ಈ ಕೆಳಕಾಣಿಸಿದ ದಿನಾಂಕ ಮತ್ತು ಸಮಯದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಮೈಸೂರು. ರವರು ಮಾರ್ಗಮುಕ್ತತೆಗೆ ಸಹಮತ ನೀಡಿರುತ್ತಾರೆಂದು ತಿಳಿಸಿ ಮತ್ತು ತಾವು ಸಹ ಮಾರ್ಗ ಮುಕ್ತತೆಗೆ ಸಹಮತ ನೀಡಿರುತ್ತೀರಿ.

| ಕ್ರ.ಸಂ | ವಿದ್ಯುತ್ ಮಾರ್ಗದ ಹೆಸರು | ದಿನಾಂಕ | ಸಮಯ | ಷರಾ |
|---|---|---|---|---|
| 1 | 66 ಕೆ.ವಿ. ಹೂಟಗಳ್ಳಿ-ಬಾರ್ಕ್1 ಮತ್ತು 2 ಜೋಡಿ ಮಾರ್ಗ ಹಾಗೂ 66 ಕೆ.ವಿ. ಹೂಟಗಳ್ಳಿ ಹುಣಸೂರು ಮಾರ್ಗ | 18.02.2022 ಹಾಗೂ 19.02.2022 | ಬೆಳಿಗ್ಗೆ 08:00 ರಿಂದ ಸಂಜೆ 17:00 ಗಂಟೆ | ಮಾರ್ಗ ಮುಕ್ತತೆಗೂ ಮುನ್ನ ಇ.ಹೆಚ್.ಟಿ. ಗ್ರಾಹಕಾರಾದ ಬಾರ್ಕ್ ಮೈಸೂರು ರವರಿಂದ ನಿರಾಕ್ಷೇಪಣೆ ಪತ್ರವನ್ನು ಪಡೆಯಲಾಗುವುದು. |
| 2 | 66 ಕೆ.ವಿ. ಹೂಟಗಳ್ಳಿ-ಇಲವಾಲ-ಪಿರಿಯಾಪಟ್ಟಣ ಮಾರ್ಗ | 20.02.2022 | ಬೆಳಿಗ್ಗೆ 06:00 ರಿಂದ ಸಂಜೆ 18:00 ಗಂಟೆ | ಮಾರ್ಗ ಮುಕ್ತತೆ ದಿನಾಂಕಗಳಂದು ಐ.ಪಿ.ಫೀಡರ್‌ಗಳಿಗೆ ರಾತ್ರಿ ವೇಳೆ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಂಡು NJY/Town/WS ಫೀಡರ್‌ಗಳ ಹೊರೆಯನ್ನು 66ಕೆವಿ ಹೂಟಗಳ್ಳಿ - ಇಲವಾಲ ಮಾರ್ಗದ ಮೂಲಕ ವಿದ್ಯುತ್ ಪೂರೈಸಬಹುದಾಗಿರುತ್ತದೆ |

ಆದ್ದರಿಂದ ಮೈಸೂರು ನಗರ ಕೇರ್ಗಳ್ಳಿ ಕೈಗಾರಿಕಾ ಪ್ರದೇಶ ವ್ಯಾಪ್ತಿಯಲ್ಲಿ ಹಾದುಹೋಗಿರುವ 220 ಕೆ.ವಿ ಮತ್ತು 66 ಕೆ.ವಿ ಅಧಿಕ ವಿದ್ಯುತ್ ಮಾರ್ಗಗಳ ಸ್ಥಳಾಂತರ/ಎತ್ತರಿಸುವುದು/ಮಾರ್ಪಾಡು ಮಾಡುವ ಸಂಬಂಧ 66 ಕೆ.ವಿ ಹೂಟಗಳ್ಳಿ – ಹುಣಸೂರು ಮತ್ತು ಹೂಟಗಳ್ಳಿ-ಇಲವಾಲ-ಪಿರಿಯಾಪಟ್ಟಣ ಏಕ ಮಾರ್ಗದಲ್ಲಿನ ಟವರ್ ಬದಲಾವಣೆ ಮತ್ತು ವಾಹಕ ಎಳೆಯುವ ಕಾಮಗಾರಿಯನ್ನು ಕೈಗೊಳ್ಳಲು 66 ಕೆ.ವಿ. ಹೂಟಗಳ್ಳಿ-ಬಾರ್ಕ್1 ಮತ್ತು 2 ಜೋಡಿ ಮಾರ್ಗ, 66 ಕೆ.ವಿ. ಹೂಟಗಳ್ಳಿ –ಹುಣಸೂರು ಮಾರ್ಗ ಮತ್ತು 66 ಕೆ.ವಿ. ಹೂಟಗಳ್ಳಿ-ಇಲವಾಲ-ಪಿರಿಯಾಪಟ್ಟಣ ಮಾರ್ಗಗಳ ಮಾರ್ಗ ಮುಕ್ತತೆ ಪಡೆಯಲು ಮೇಲೆ ತಿಳಿಸಿದ ದಿನಾಂಕಗಳಂದು ನಿರ್ದೇಶಕರು(ತಾಂತ್ರಿಕ) ರವರು ಉಲ್ಲೇಖ(3) ರಲ್ಲಿ ಅನುಮೋದಿಸಿರುತ್ತಾರೆ.

ಈ ನಿಟ್ಟಿನಲ್ಲಿ, ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ ರವರು ಗ್ರಾಹಕರುಗಳಿಗೆ ವಿದ್ಯುತ್ ವ್ಯತ್ಯಯದ ಮಾಹಿತಿಯನ್ನು ಮುಂಚಿತವಾಗಿ ಪತ್ರಿಕಾ ಪ್ರಕಟಣೆಯ ಮೂಲಕ ತಲುಪಿಸುವುದು, ಕೋವಿಡ್ ಆಸ್ಪತ್ರೆಗಳಿಗೆ ನಿರಂತರ ವಿದ್ಯುತ್ ಸರಬರಾಜು ಒದಗಿಸುವುದು ಮತ್ತು ಸದರಿ ದಿನಾಂಕಗಳಂದು ವ್ಯಾಪ್ತಿಯ ಎಲ್ಲಾ 11ಕೆವಿ ಮಾರ್ಗಗಳ/ಪರಿವರ್ತಕಗಳ ನಿರ್ವಹಣೆಯನ್ನು ಕೈಗೊಳ್ಳುವುದು ಹಾಗೂ ಕೇಂದ್ರ ಸ್ಥಾನದಲ್ಲೇ ಇದ್ದು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿವಂತೆ ಸೂಚಿಸಲು ನಿರ್ದೇಶಿಸಲ್ಪಟ್ಟಿರುತ್ತೇನೆ.

**ಸೂಚನೆ: ಮೇಲೆ ತಿಳಿಸಿರುವ ಮಾರ್ಗಮುಕ್ತತೆಯ ದಿನಾಂಕಗಳಂದು ಯಾವುದೇ ಸರ್ಕಾರಿ ಕಾರ್ಯಕ್ರಮಗಳು/ಪರೀಕ್ಷೆಗಳಿದ್ದಲ್ಲಿ ಸದರಿ ದಿನಾಂಕದಂದು ಮಾರ್ಗಮುಕ್ತತೆಯು ರದ್ದಾಗುವುದೆಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.**

ತಮ್ಮ ವಿಶ್ವಾಸಿ,

16.2.2022

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಚಾವಿಸನಿನಿ, ಮೈಸೂರು

**ಪ್ರತಿಗಳು:**

1. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ, ಮೈಸೂರು.
2. ಕಾರ್ಯನಿವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ, ವಿ.ವಿ.ಮೊಹಲ್ಲಾ/ಹುಣಸೂರು/ಕೆ.ಆರ್.ನಗರ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಡಿ.ಸಿ.ಸಿ, ಚಾ.ವಿ.ಸ.ನಿ.ನಿ, ಮೈಸೂರು.
4. ಆಪ್ತ ಸಹಾಯಕರು, ವ್ಯವಸ್ಥಾಪಕ ನಿರ್ದೇಶಕರು/ ತಾಂತ್ರಿಕ ಸಹಾಯಕರು, ನಿರ್ದೇಶಕರು (ತಾಂತ್ರಿಕ), ಚಾವಿಸನಿನಿ ರವರ ಗಮನಕ್ಕೆ.

ಕಛೇರಿ ಪ್ರತಿ/ಮುಖ್ಯ ಕಡತ.